Low Grade Officials in Revenue Department, Chikmagalur District.

Q.—906. Sri Y. M. CHANDRASEKHARIAH (Kadur).—

Will the Government be pleased to state :—

(*a*) the number of low grade Officials belonging to the Revenue Department in the Taluk and District offices of the Chikmagalur District ;

(*b*) of these, how many are permanent ;

(*c*) how many are not permanent ;

(*d*) how many have been given increments ;

(*e*) how many have been asked to refund the increments drawn by them ?

A.—Sri Kadidal MANJAPPA (Minister for Revenue and Public Works).—

(*a*) 229.
(*b*) 83.
(*c*) 146.
(*d*) 143.
(*e*) 14.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ತಾಲ್ಲೂಕು ಮತ್ತು ಜಿಲ್ಲಾಕನಬೆಗಳಲ್ಲಿ ಕೆಲಸಮಾಡತಕ್ಕ 229 ಜನ ನಾನ್‌ಗೆಜೆಟೆಡ್ ನೌಕರರ ಪೈಕಿ ಕೇವಲ 83 ಜನರು ಮಾತ್ರ ಖಾಯಂ ಆಗಿದ್ದು ಇನ್ನುಳಿದ 146 ಜನ ನೌಕರರು ಈವರೆಗೂ ಖಾಯಂ ಆಗದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ವೇಕೆನ್ಸಿಗಳಿದ್ದರೆ ಅವರನ್ನೂ ಖಾಯಂಮಾಡಬಹುದಾಗಿತ್ತು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—7-8 ವರ್ಷಗಳಿಗೆ ಮೇಲ್ಪಟ್ಟ ಒಂದೇ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದಾರ್ಗೂ 229 ಸ್ಥಾನಗಳಿರುವ ಕಡೆಯಲ್ಲಿ ಬರೀ 83 ಜನರು ಮಾತ್ರ ಖಾಯಂ ಆಗಿರಬೇಕಾಗಿದ್ದರೆ ಇನ್ನು ಹಂಗಾಮಿಯಾಗಿ ಕೆಲಸ ಮಾಡತಕ್ಕಂಥ ಈ ನೂರಾರು ಜನರಿಗೆ ಕೆಲಸ ಖಾಯಂ ಆಗಲು ಅವಕಾಶ ಹ್ಯೇಗೆ ಸಿಕ್ಕುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಚಾರವನ್ನು ಅನೇಕರು ಅನೇಕಸಾರಿ ನನ್ನ ಗಮನಕ್ಕೆ ತಂದಿದ್ದಾರೆ. ಈ ವಿಚಾರಗಳನ್ನೆಲ್ಲಾ ಕೂಲಂಕಷವಾಗಿ ವಿಚಾರಮಾಡಿ ಒಂದು ತಪಶೀಲ್ ವರದಿಯನ್ನು ಕಳುಹಿಸಬೇಕೆಂದು ಬರೆದಿದ್ದೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಗೆ ಸ್ವಲ್ಪ ಹೆಚ್ಚು ಕಮ್ಮಿಯಾಗಿದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಅದನ್ನು ವಿಚಾರಮಾಡುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾವು ಇಕ್ರಿಮೆಂಟ್ ಕೊಟ್ಟಿರತಕ್ಕ 143 ಜನರ ಪೈಕಿ ಕೇವಲ 14 ಜನಗಳಿಗೆ ಮಾತ್ರ ಅವರು ಪಡೆದಿರತಕ್ಕ ಇಕ್ರಿಮೆಂಟುಗಳನ್ನು ವಾಪಸ್ ಕೊಡಬೇಕೆಂದು ಹೇಳಿದ್ದೀರಿ. ಇದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನಿಗೆ ವಿರೋಧವಾಗಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಹಾಗೆ ಮಾಡಿರಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವರ್ಷಂ ಪ್ರತಿ ಈ ಸರ್ಕಾರಿ ಲೆಕ್ಕಗಳು ಆಡಿಟ್ ಆಗುತ್ತಿರುವುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ನರಿಯಾದ ಅರ್ಹತೆ ಪಡೆಯದಿದ್ದವರು ಹಾಗೆ ಇಕ್ರಿಮೆಂಟ್‌ಗಳನ್ನು ಪಡೆದಿದ್ದರೆ ಅವರು ಅದನ್ನು ಹಿಂದಕ್ಕೆ ಕೊಡಬೇಕಾಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾ॥ 23-5-1949ರಲ್ಲಿ ಒಂದಾವರ್ತಿ ಆಡಿಟ್ ಮಾಡಿದನಂತರ ಪುನಃ ಎರಡನೆಯಾವರ್ತಿಗೆ ತಾ॥ 3-5-1950 ರಲ್ಲಿ ಆಡಿಟ್ ಮಾಡಿದನಂತರ ಸರ್ಕಾರದವರು ಆ ಇಕ್ರಿಮೆಂಟುಗಳನ್ನು ಅವರಿಗೆ ಕೊಡತಕ್ಕದ್ದೇ ನರಿಯೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—1949ರಲ್ಲಿ ಕೊಟ್ಟಿದ್ದಂಥ ಇಕ್ರಿಮೆಂಟುಗಳನ್ನು ಇತ್ತೀಚೆಗೆ ಕಿತ್ತು ಕೊಳ್ಳಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಚಾರಗಳನ್ನೆಲ್ಲಾ ಪುನರ್ಪರಿಶೀಲೆ ಮಾಡುವುದಕ್ಕೆ ಹೇಳಿದ್ದೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾವು ಹೀಗೆ ಮಾಡುವುದರಿಂದ ಆ ಬಡನೌಕರರಿಗೆ ತುಂಬ ತೊಂದರೆಯಾಗುತ್ತದೆಯಾದಕಾರಣ ಅವರಿಗೆ ಕೊಡಲಾಗಿದ್ದ ಇಕ್ರಿಮೆಂಟುಗಳನ್ನು ಅವರಿಗೇ ಬಿಟ್ಟುಕೊಡುವಂತೆ ಆಜ್ಞೆಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೇ ನಾನು ಏನನ್ನೂ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಇದನ್ನು ಪುನಃ ವಿಮರ್ಶೆ ಮಾಡುತ್ತೇನೆಂದು ಮಾತ್ರ ಹೇಳಬಲ್ಲೆ.

Takavi Loans to Harijans (Remittance).

Q.—919. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) whether it has come to their notice that the Harijans to whom takavi loans were granted in 1952 and 1953 have been gradually losing their property on account of their inability to pay back the loans ;

(*b*) whether they would consider remitting the takavi loan granted to Harijans ?

A.—Sri Kadidal MANJAPPA (Minister for Revenue and Public Works).—

(*a*) No.

(*b*) If any cases of special hardship is brought to notice, it will be considered as per rules and on merits.

ಶ್ರೀ ಜೆ. ನಾರಾಯಣಪ್ಪ.—ಈಗಾಗಲೇ ಈ ಜಪ್ತಿಯಾನುಗಳನ್ನು ಸಾಲ ತೀರ್ಪಿಗಾಗಿ ಮಾರಾಟ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದರೆ ತಾವು ಆ ಜಪ್ತಿಯಾನುಗಳನ್ನು ಬಿಡಿಸಿಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಜಪ್ತಿಯಾನು ಮಾರಾಟ ಮಾಡಿದರೆ ಹೇಗೆ ಅದನ್ನು ಬಿಡಿಸಿಕೊಡುವುದು ?